‘ನನಗ ಯಾವ ದೇವರ ಸಹಾಯವೂ ಬೇಕಾಗಿಲ್ಲ... ನಾ ಏನು ಮಾಡಬೇಕಂತ ನನಗ ಗೊತ್ತೈತಿ...’

ಮಿಸ್‌ಫಿಟ್‌ನ ಸಹಾಯಕರಾದ ಬಾಬ್ಬಿ ಲೀ ಮತ್ತು ಹೀರಮ್ ಕಾಡಿನಿಂದ ಹೊರಬಂದರು. ಬಾಬ್ಬಿ ಕೈಯಲ್ಲಿ ಬೇಲಿ ತೊಟ್ಟಿದ್ದ ಹಸಿರುಗಿಳಿಗಳ ಹಳದಿ ಅಂಗಿಯಿತ್ತು. ಅದನ್ನು ಮಿಸ್‌ಫಿಟ್‌ನ ಕಡೆ ಒಗೆದ. ಮಿಸ್‌ಫಿಟ್ ಅದನ್ನು ತೊಟ್ಟುಕೊಳ್ಳುತ್ತ ಹೇಳಿದ: ‘ಅಜ್ಜಿ, ಕೇಳಿಲ್ಲಿ. ನಾನು ಅಪರಾಧ ಮಾಡಿದ ಮ್ಯಾಲ ಅದರ ಬಗ್ಗೆ ಜಾಸ್ತಿ ವಿಚಾರ ಮಾಡಂಗಿಲ್ಲ. ಒಂದಾದ ಮ್ಯಾಲ ಮತ್ತೊಂದು ಮರೀತಾ ಹೋಗ್ತೇತಿ... ಮತ್ತ ಅದಕ್ಕ ಶಿಕ್ಷೆನೂ ಆಗಬಹುದು...’ ಮಿಸ್‌ಫಿಟ್ ಇದೀಗ ಹಾಕಿಕೊಂಡ ಅಂಗಿ ತನ್ನ ಮಗನದೆಂಬುದು ಅಜ್ಜಿಗೆ ಮರೆತುಹೋಗಿತ್ತು. ಅಷ್ಟೊತ್ತಿಗೆ ಬೇಲಿಯ ಹೆಂಡತಿ ಯಾವುದೇ ಅರಿವಿಲ್ಲದವರಂತೆ ದೊಡ್ಡದಾಗಿ ಚೀರುತ್ತಿದ್ದಳು. ಮಿಸ್‌ಫಿಟ್ ಅಂದ: ‘ಓ, ಮೇಡಮ್, ನಿನ್ನ ಗಂಡ ಆ ಕಡೆ ಹೋದನಲ್ಲ, ಆ ಕಡೆ ನೀನು ಮತ್ತು ನಿನ್ನ ಮಗಳು ಹೋಗಿ ನೋಡ್ತಿರೇನು ಏನಾತಂತ.’

‘ನಿನಗ ದೊಡ್ಡ ನಮಸ್ಕಾರ...’ ಮೂರ್ಛೆಯಲ್ಲಿದ್ದವಳಂತೆ ಅವಳು ಹೇಳಿದಳು. ಅವಳಿಗೆ ಕುಂತಲ್ಲಿಂದ ಏಳಲು ಆಗಲಿಲ್ಲ. ಅಪಘಾತದಲ್ಲಿ ಅವಳ ಒಂದು ಕೈ ಮುರಿದು ಜೋತಾಡುತ್ತಿತ್ತು. ಹೀರಮ್ ಅವಳಿಗೆ ನೆರವಾದ. ಇನ್ನೊಬ್ಬ ಬಾಲಕಿಯ ಕೈ ಹಿಡಿಯಲು ಹೋದ. ಆ ಹುಡುಗಿ ಕೊಸರಿಕೊಂಡಳು: ‘ಆಂವ ನನ್ನ ಕೈ ಹಿಡಿಯುವುದು ಬೇಕಾಗಿಲ್ಲ. ಅಂವನ್ನ ನೋಡಿದರ ನನಗ ಹಂದಿ ನೋಡಿದಂಗ ಆಗತೇತಿ...’ ಹುಡುಗಿ ದಿಟ್ಟವಾಗಿ ಹೇಳಿದಳು. ಅಷ್ಟಾದರೂ ಬಾಬ್ಬಿ ನಗುತ್ತ ಅವಳನ್ನು ಅನಾಮತ್ತಾಗಿ ಎತ್ತಿಕೊಂಡು ಅವಳ ತಾಯಿಯನ್ನು ಎಳೆದೊಯ್ಯುತ್ತಿದ್ದ ಕಾಡಿನ ಕಡೆ ನಡೆದ. ಅಜ್ಜಿಯ ಗಂಟಲಿಂದ ದನಿ ಹೊರಡದಾಯಿತು. ಅವಳು ಬರೀ ‘ಜೇಸಸ್... ಜೇಸಸ್...’ ಎಂದು ಪ್ರಾರ್ಥಿಸುತ್ತಿದ್ದಳು.

‘ನೀನು ಜೇಸಸ್ ಹೆಸರು ಹೇಳ್ತೀಯ... ಜೇಸಸ್‌ಗೂ ಕೂಡ ಯಾವುದೇ ತಪ್ಪು ಇಲ್ಲದ ಶಿಕ್ಷೆಯಾತು... ನನಗೂ ತಪ್ಪು ಮಾಡೇನಿ ಅಂತ ಪೊಲೀಸರು ಸಾಬೀತು ಮಾಡಿದರು... ಅದಕ್ಕ ನಾನೀಗ ಎಲ್ಲ ದಾಖಲೆ ಇಟ್ಟಕೊಳ್ಳಲಿಕ್ಕೆ ಸುರು ಮಾಡೇನಿ...’

ಆಗ ಹೃದಯವನ್ನು ಇರಿಯುವಂತಹ ನೋವಿನ ದನಿ ಗಿಡ ಮರಗಳ ಹಿಂದಿನಿಂದ ಕೇಳಿಬಂದಿತು.

